ಸ್ವೀಕಾರ

■ ವಿವೇಕಾನಂದ ಕಾಮತ್

# ದೇವಸ್ಥಾನದಲ್ಲಿ ಅನ್ನದಾನ

'ನಡೀರಿ ಹೋಗೋಣ.. ಬಿಸಿಲೇತ್ರಾ ಇದೆ. ನಂಗೆ ಪರೀಕ್ಷೆಗೆ ಓದೋದಿದೆ..'. ಅವಳ ಪ್ರತಿಕ್ರಿಯೆಗೆ ಅವನು ನಿರಾಶನಾಗಿದ್ದ. ಯಾವುದೋ ಲೋಕದಲ್ಲಿ ಮೈಮರೆತಂತೆ ಅವಳ ಕೈ ಬಳಸಿ ಹಿಡಿದಿದ್ದ ಸೂರ್ಯ, ಇನ್ನು ಕೆಲವು ಕ್ಷಣಗಳು ಕಳೆದಿದ್ದರೆ ಹಾಗೇ ಅವಳನ್ನು ಎದೆಗಾನಿಸಿ ಕೊಳ್ಳುತ್ತಿದ್ದನೋ ಏನೋ! ತಾನು ಬಯಸಿದ ಒಲವು ಅವಳ ಕಂಗಳಲ್ಲೂ ತುಳುಕಿತ್ತು. ಅಥವಾ ತನಗೆ ಹಾಗೆ ಭಾಸವಾಯಿತೇನೋ! ತಾನು ಇವಳಿಗೆ ಪೂರ್ತಿಯಾಗಿ ಸೋತಿರುವೆನಲ್ಲಾ.. ತನಗೆ ಆ ಮನೆಯಲ್ಲಿನ್ನೂ ಉಳಿದುಕೊಳ್ಳುವಂತೆ ಮಾಡಿರುವುದು ಅಪೂರ್ವಳ ಸಾಮೀಪ್ಯವೊಂದೇ. ಇಲ್ಲದಿದ್ದರೆ ಮುಂಚಿನಂತೆ ಆ ಮನೆ ತೊರೆದು ಹೋಗಬಿಡಬಹುದಿತ್ತು.

